**<u>ಸಾಕ್ಷಿಯನ್ನು ದಿಃ 02.06.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಹೆಚ್ ಜೆ ಎನ್ ವಕೀಲರ ಪರವಾಗಿ ಎಸ್ಆರ್‌ಕೆ ವಕೀಲರಿಂದಃ-</u>**

ನನ್ನ ತಂದೆ ಕೃಷ್ಣ ಮೂರ್ತಿ ತಾಯಿ ಕಮಲಾಬಾಯಿ ಯವರಿಗೆ 7 ಜನ ಮಕ್ಕಳು ಅವರುಗಳೆಂದರೆ ರುಮಿಣಿ ಬಾಯಿ , ರಾಧ ಬಾಯಿ , ಮೀರಾ ಬಾಯಿ , ರೋಹಿಣಿ ಬಾಯಿ , ರಾಮಕೃಷ್ಣ, ಶ್ರೀನಿವಾಸ ಮತ್ತು ಸುಜಾತ. ವಾದ ಪತ್ರದಲ್ಲಿ ರೋಹಿಣಿ ಬಾಯಿ ರವರಿಗೆ ಜಮೀನು ಕೊಟ್ಟಿದ್ದೇವೆ ಎಂದು ಹೇಳಿದ್ದು , ಸದರಿ ಜಮೀನಿನ ಸರ್ವೆ ನಂಬರ್ ನೆನಪಿಲ್ಲ. ಆ ಬಗ್ಗೆ ದಾಖಲೆಯನ್ನು ಈಗಾಗಲೆ ಹಾಜರು ಪಡಿಸಿದ್ದೇನೆ . ರೋಹಿಣಿ ಬಾಯಿಯವರನ್ನು ಪಕ್ಷಗಾರರನ್ನಾಗಿ ಏಕೆ ಮಾಡಿಲ್ಲ ಎಂದರೆ ಸಾಕ್ಷಿಯು ಅವರಿಗೆ ಈಗಾಗಲೆ ಹೆಚ್ಚು ಭಾಗ ಕೊಡಲಾಗಿದೆ ಎನ್ನುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)

1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.